# ಲೋಕಸಭೆ ಉತ್ಪಾದಕತೆ ಶೇ.116

## ಪ್ರಲ್ಹಾದ ಜೋಶಿ ಮಾಹಿತಿ | ಅಧಿವೇಶನ ಮುಕ್ತಾಯ

ನವದೆಹಲಿ: ಸಂಸತ್‌ನ ಚಳಿಗಾಲದ ಅಧಿವೇಶನ ಶುಕ್ರವಾರ ಮುಕ್ತಾಯವಾಗಿದ್ದು, ಉತ್ಪಾದಕತೆಯಲ್ಲಿ ಉತ್ತಮ ಸಾಧನೆ ತೋರಿದೆ. ಲೋಕಸಭೆ ಉತ್ಪಾದಕತೆ ಶೇ. 116 ಆಗಿದ್ದು, ರಾಜ್ಯಸಭೆಯ ಸಾಧನೆ ಶೇ. 99 ಆಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಉಭಯ ಸದನಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲಾಪಗಳ ಗುಣಮಟ್ಟದ ಬಗ್ಗೆ ಮೆಚ್ಚುಗೆ ಸೂಚಿಸಿದರು.

ಪ್ರಸಕ್ತ ಅಧಿವೇಶನದಲ್ಲಿ ಲೋಕಸಭೆಯಲ್ಲಿ 18 ಮಸೂದೆಗಳನ್ನು ಮಂಡಿಸಲಾಗಿತ್ತು. ಪೌರತ್ವ ತಿದ್ದುಪಡಿ ಮಸೂದೆ ಸಹಿತ 15 ಮಸೂದೆಗಳನ್ನು ಕೆಳಮನೆ ಅಂಗೀಕರಿಸಿದೆ. ಮೇಲ್ಮನೆಯಾದ ರಾಜ್ಯಸಭೆಯಲ್ಲಿ 15 ಮಸೂದೆಗಳು ಅಂಗೀಕಾರವಾಗಿವೆ. 15 ಮಸೂದೆಗಳಿಗೆ ಎರಡೂ ಸದನಗಳು ಒಪ್ಪಿಗೆ ನೀಡಿವೆ.

ಅಧಿವೇಶನದ ಸಮಾರೋಪ ಭಾಷಣ ಮಾಡುತ್ತಿದ್ದ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾರಿಗೆ ಕಾಂಗ್ರೆಸ್ ಸದಸ್ಯರು ಅಡ್ಡಿಪಡಿಸಿದ್ದನ್ನು ಪ್ರಸ್ತಾಪಿಸಿದ ಜೋಷಿ, ಬಹುಶಃ ಈ ರೀತಿಯ ಘಟನೆ ನಡೆದಿದ್ದು ಇದೇ ಮೊದಲ ಸಲ ಎಂದರು.

ಭಾರತೀಯ ವೈದ್ಯಕೀಯ ಮಂಡಳಿ ತಿದ್ದುಪಡಿ ಮಸೂದೆ, ರಾಷ್ಟ್ರೀಯ ಆರೋಗ್ಯ ಮಾನವ ಸಂಪನ್ಮೂಲ ಮಸೂದೆ, ಅಂತಾರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರ ಪ್ರಾಧಿಕಾರ ಮಸೂದೆಗಳನ್ನು ವಾಪಸ್ ಪಡೆಯಲಾಗಿದೆ.



### ಲೋಕಸಭೆ ಅಂಗೀಕರಿಸಿದ ಪ್ರಮುಖ ಮಸೂದೆ

- ಚಿಟ್‌ಫಂಡ್ಸ್ ತಿದ್ದುಪಡಿ ಮಸೂದೆ.
- ಇ ಸಿಗರೇಟ್ ನಿರ್ಬಂಧ ಮಸೂದೆ.
- ತೆರಿಗೆ ಕಾನೂನುಗಳ ತಿದ್ದುಪಡಿ ಮಸೂದೆ.
- ಶಸ್ತ್ರಾಸ್ತ್ರ ತಿದ್ದುಪಡಿ ಮಸೂದೆ.
- ಪೌರತ್ವ ತಿದ್ದುಪಡಿ ಮಸೂದೆ.
- ಕೇಂದ್ರೀಯ ಸಂಸ್ಕೃತ ವಿವಿ ಮಸೂದೆ.

### ಉಭಯ ಸದನಗಳು ಅಂಗೀಕರಿಸಿದ ಪ್ರಮುಖ ಮಸೂದೆಗಳು

- ಜಲಿಯನ್‌ವಾಲಾಬಾಗ್ ರಾಷ್ಟ್ರೀಯ ಸ್ಮಾರಕ ತಿದ್ದುಪಡಿ ಮಸೂದೆ.
- ವಿಶೇಷ ರಕ್ಷಣಾ ದಳ ತಿದ್ದುಪಡಿ ಮಸೂದೆ.
- ಶಸ್ತ್ರಾಸ್ತ್ರ ತಿದ್ದುಪಡಿ ಮಸೂದೆ.
- ಪೌರತ್ವ ತಿದ್ದುಪಡಿ ಮಸೂದೆ.